ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 5-11-2016

# ಪತ್ರಿಕಾ ಆಮಂತ್ರಣ

1. ಪತ್ರಿಕಾಗೋಷ್ಠಿ:

ರವೀಂದ್ರ ಕಲಾಕ್ಷೇತ್ರ ಸುವರ್ಣ ಸಂಭ್ರಮ – "ರಂಗಭೂಮಿ ಉತ್ಸವ"

ಶ್ರೀನಿವಾಸ ಜಿ. ಕಪ್ಪಣ್ಣ, ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರು.

ದಿನಾಂಕ: 07-11-2016 ಸೋಮವಾರ

ಸಮಯ: ಬೆಳಿಗ್ಗೆ 11-00 ಗಂಟೆಗೆ

ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಂಗಳೂರು.

2. ಪತ್ರಿಕಾಗೋಷ್ಠಿ:

ಆರ್. ವಿ. ದೇಶಪಾಂಡೆ – ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು.

ಅಂತರಾಷ್ಟ್ರೀಯ ಮಹಿಳಾ ಉದ್ದಿಮೆದಾರರ ಸಮ್ಮೇಳನ ಥಿಂಕ್ ಬಿಗ್- 2016 ಕುರಿತು.

ದಿನಾಂಕ: 07-11-2016 ಸೋಮವಾರ

ಸಮಯ: ಮಧ್ಯಾಹ್ನ 12-00 ಗಂಟೆಗೆ

ಸ್ಥಳ: ಕೊಠಡಿ ಸಂಖ್ಯೆ 313, ಕಮಿಟಿ ಹಾಲ್, ಮೂರನೇ ಮಹಡಿ, ವಿಧಾನಸೌಧ, ಬೆಂಗಳೂರು.

3. ಪತ್ರಿಕಾಗೋಷ್ಠಿ:

ಶ್ರೀಮತಿ ಭಾರತಿ ಶಂಕರ್ – ಆದ್ಯಕ್ಷರು ಕರ್ನಾಟಕ ರಾಜ್ಯ ಅಭಿವೃದ್ಧಿ ನಿಗಮ

ದಿನಾಂಕ: 07-11-2016 ಸೋಮವಾರ

ಸಮಯ: ಮಧ್ಯಾಹ್ನ 11-00 ಗಂಟೆಗೆ

ಸ್ಥಳ: ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, 6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಜಯನಗರ, ಬೆಂಗಳೂರು.

ಪತ್ರಿಕಾ ಪ್ರಕಟಣೆ

# ವಿವಿಧ ಇಲಾಖೆಗಳಲ್ಲಿನ ತಾಂತ್ರಿಕ/ತಾಂತ್ರಿಕೇತರ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು, ನವೆಂಬರ್ 5 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ವಿವಿಧ ಇಲಾಖೆಗಳಲ್ಲಿನ ವಿವಿಧ ತಾಂತ್ರಿಕ/ತಾಂತ್ರಿಕೇತರ ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಗಳನ್ನು ನವೆಂಬರ್ 4 ರಂದು ಆಯೋಗದ ಅಂತರ್ಜಾಲ http://kpsc.kar.nic.in/selectionlist ದಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಆಕ್ಷೇಪಣೆಗಳನ್ನು ಸಲ್ಲಿಸಲು ಬಯಸುವ ಅಭ್ಯರ್ಥಿಗಳು ನವೆಂಬರ್ 10 ರೊಳಗಾಗಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು – 560 001 ಇವರಿಗೆ ಸಲ್ಲಿಸಬಹುದಾಗಿದೆ. ತದನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

# ಕರ್ನಾಟಕ ಜ್ಞಾನ ಆಯೋಗದಿಂದ 'ಕರ್ನಾಟಕ ಶಿಕ್ಷಣ ನೀತಿ' ವರದಿ ಸಲ್ಲಿಕೆ

ಬೆಂಗಳೂರು, ನವೆಂಬರ್ 5 (ಕರ್ನಾಟಕ ವಾರ್ತೆ)

ಕರ್ನಾಟಕ ಜ್ಞಾನ ಆಯೋಗದ ಅಧ್ಯಕ್ಷ ಡಾ. ಕಸ್ತೂರಿ ರಂಗನ್ ನೇತೃತ್ವದ ಸಮಿತಿಯು 'ಕರ್ನಾಟಕ ಶಿಕ್ಷಣ ನೀತಿ' ಕರಡು ವರದಿಯನ್ನು ಇಂದು ಸರಕಾರಕ್ಕೆ ಸಲ್ಲಿಸಿತು.

ವಿಧಾನಸೌಧದಲ್ಲಿ ಉನ್ನತ ಶಿಕ್ಷಣ ಸಚಿವ ಬಸವರಾಜರಾಯರೆಡ್ಡಿ ಹಾಗೂ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ತನ್ವೀರ್ ಸೇಠ್ ವರದಿ ಸ್ವೀಕರಿಸಿ ಮಾತನಾಡಿ ಕರ್ನಾಟಕ ಜ್ಞಾನ ಆಯೋಗವು ನೀಡಿರುವ ವರದಿಯನ್ನು ಸಚಿವ ಸಂಪುಟದ ಮುಂದೆ ತಂದು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು ಎಂದರು.

ಆಯೋಗದ ಸದಸ್ಯರು ಹಾಗೂ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಎಸ್‌ಎಂ:ಕೆಪಿಪಿ:ಜೆಡಿ:ಜಿಪಿಆರ್.

# ಬರುವ ಶೈಕ್ಷಣಿಕ ವರ್ಷದಿಂದ ಬೆಂಗಳೂರಿನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕಾನಾಮಿಕ್ಸ್ ಶಾಲೆ ಆರಂಭ

**– ಬಸವರಾಜ ರಾಯರೆಡ್ಡಿ**

ಬೆಂಗಳೂರು, ನವೆಂಬರ್ 5 (ಕರ್ನಾಟಕ ವಾರ್ತೆ)

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 125ನೇ ಜನ್ಮ ವರ್ಷಾಚರಣೆ ಸಂದರ್ಭದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಡಾ. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಶಾಲೆ ಆರಂಭಿಸಲು ಮುಖ್ಯಮಂತ್ರಿಗಳು ಒಪ್ಪಿಗೆ ನೀಡಿದ್ದಾರೆ, ಬರುವ ಶೈಕ್ಷಣಿಕ ವರ್ಷದಿಂದಲೇ ಶಾಲೆ ಪ್ರಾರಂಭವಾಗಲಿದೆ ಎಂದು ಉನ್ನತ ಶಿಕ್ಷಣ ಸಚಿವ ಬಸವರಾಜರಾಯರೆಡ್ಡಿ ತಿಳಿಸಿದರು.

ವಿಧಾನಸೌಧದಲ್ಲಿ ಇಂದು ಪ್ರಕರ್ತರೊಂದಿಗೆ ಮಾತನಾಡಿದ ಸಚಿವರು ಈ ಸಂಬಂಧ ಸರ್ಕಾರ ಈಗಾಗಲೇ 107 ಕೋಟಿ ರೂಪಾಯಿಗಳನ್ನು ಬಿಡುಗಡೆಮಾಡಿದೆ, ಶಾಲೆಗೆ ಮೂಲಭೂತ ಸೌಕರ್ಯ ಕಲ್ಪಿಸುವ ಸಂಬಂಧ ರಾಜ್ಯದ ನಿವೃತ್ತ ಮುಖ್ಯ ಕಾರ್ಯದರ್ಶಿ ಎಸ್.ವಿ. ರಂಗನಾಥ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ ಎಂದರು.

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಡಾ. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಶಾಲೆ ಪ್ರಾರಂಭಿಸಲು 50 ಎಕರೆ ಜಮೀನನ್ನು ಪಡೆಯಲಾಗಿದೆ, ಡಾ. ಅಂಬೇಡ್ಕರ್ ಅವರ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯಲ್ಲಿ ಅಧ್ಯಯನ ನಡೆಸಿದ ಮೊದಲ ಭಾರತೀಯ ಆದಕಾರಣ ಅವರ ಹೆಸರಿನಲ್ಲೇ ಬೆಂಗಳೂರಿನಲ್ಲಿ ಡಾ. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಶಾಲೆ ಪ್ರಾರಂಭಿಸಲು ತೀರ್ಮಾನಿಸಲಾಯಿತು ಎಂದು ಸಚಿವರು ಹೇಳಿದರು.

ಎಸ್‌ಎಂ:ಕೆಪಿಪಿ:ಜೆಡಿ:ಜಿಪಿಆರ್.

# ನವೆಂಬರ್ 13, 14 ರಂದು ಮಕ್ಕಳ ಹಬ್ಬ

**ಬೆಂಗಳೂರು, ನವೆಂಬರ್ 5 (ಕರ್ನಾಟಕ ವಾರ್ತೆ)**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನವೆಂಬರ್ 14 ರ ಮಕ್ಕಳ ದಿನಾಚರಣೆ ಅಂಗವಾಗಿ ಕಬ್ಬನ್‌ಪಾರ್ಕ್ ಮತ್ತು ಬಾಲಭವನ ಆವರಣದಲ್ಲಿ ನವೆಂಬರ್ 13 ಮತ್ತು 14 ರಂದು ಮಕ್ಕಳ ಹಬ್ಬ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಮಕ್ಕಳಿಗಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಗ್ರಾಮೀಣ ಕ್ರೀಡೆಗಳು ಮತ್ತು ವಿವಿಧ ಇಲಾಖೆಗಳ ಸಹಯೋಗದಲ್ಲಿ ವಸ್ತುಪ್ರದರ್ಶನ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಮುಖ್ಯವಾಗಿ ಜಾನಪದ ಕಲಾ ಪ್ರದರ್ಶನ, ಸಮೂಹ ನೃತ್ಯ, ಮ್ಯಾಜಿಕ್ ಶೋ, ಹಾಸ್ಯ ಪ್ರದರ್ಶನ, ಬೊಂಬೆ ವೈಭವ, ಯಕ್ಷಗಾನ ಸೇರಿದಂತೆ ಸೂತ್ರದ ಗೊಂಬೆ ಪ್ರದರ್ಶನ ಸಹ ಇದೆ.

ಗ್ರಾಮೀಣ ಕ್ರೀಡೆಗಳು ಹಾಗೂ ಸಾಹಸ ಕ್ರೀಡೆಗಳು, ಕುಸ್ತಿ, ಮಲ್ಲಕಂಬ, ಗಿಲ್ಲಿದಾಂಡು, ಚೌಕಾಭಾರ, ಲಗೋರಿ, ಕುಂಟಬಿಲ್ಲೆ, ಚಿತ್ರಕಲೆ, ಬುಗುರಿ ಆಟಗಳು ಇರಲಿದ್ದು ದೊಡ್ಡವರು ಸಹ ಮಕ್ಕಳೊಂದಿಗೆ ಬಂದು ಭಾಗವಹಿಸಬಹುದು ಹಾಗೂ ಪ್ರವೇಶ ಉಚಿತ ಎಂದು ಪ್ರಕಟಣೆ ತಿಳಿಸಿದೆ.

## “Swachh Bharat Pakhwada”

### Bangalore, November 6, (Karnataka Information)

**Further, as a part of Swachhata Campaign, India Post has been identified for observance of Swachhta Pakhwada from 1.11.2016 to 15.11.2016 by the nodal Ministry. “Swachh Bharat Pakhwada” is observed at Bengaluru GPO for the fortnight 1.11.2016 to 15.11.2016. A special cleanliness drive is undertaken at office premises to create awareness and to increase the level of cleanliness in the Government offices as well as surroundings.**

**As a part of Swachhata activity, Deputy Chief Postmaster Sri. B.G.Thimmoji Rao along with the 30 officials working at Bengaluru General Post office visited Press club at 11.00 hrs on 5.11.2016 to participate in the Shramdhan.**

**The officers of the Press club supported the Swachhata activity to a larger extent. The proposed activity was very fruitful and with the great cooperation of the members of the Press club.**